# ಕನ್ನಡ ಕಥಾ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಮತ್ತು ಸಾಮಾಜಿಕ ಪರಿವರ್ತನೆಯ ಅಭಿವ್ಯಕ್ತಿ

**ನಂದಿನಿ ಎಸ್.*** & **ಶಿವಕುಮಾರ ಡಿ.ಸಿ.****

**DOI: https://doi.org/10.5281/zenodo.19638159**

**ABSTRACT**

ಕನ್ನಡ ಕಥಾ ಸಾಹಿತ್ಯವು ಕಾಲದ ಕನ್ನಡಿಯಂತೆ ಸಮಾಜದ ವಿವಿಧ ಮುಖಗಳನ್ನು ಪ್ರತಿಬಿಂಬಿಸುತ್ತದೆ, ವಿಶೇಷವಾಗಿ ಸ್ತ್ರೀ ಸಂವೇದನೆ, ಮಹಿಳೆಯ ಅನುಭವಗಳು, ಭಾವನೆಗಳು, ಹಕ್ಕುಗಳು ಮತ್ತು ಸಾಮಾಜಿಕ ಪರಿವರ್ತನೆಯ ಅಭಿವ್ಯಕ್ತಿ ಕಥೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಕನ್ನಡ ಕಥಾ ಸಾಹಿತ್ಯದಲ್ಲಿ ಮಹಿಳೆಯರ ಜೀವನ ಹೋರಾಟ, ಅವರ ಅಂತರಂಗದ ಭಾವನೆಗಳು ಮತ್ತು ಸಮಾಜದಲ್ಲಿ ಅವರಿಗೆ ದೊರಕುವ ಸ್ಥಾನ ಮುಖ್ಯ ವಿಷಯಗಳಾಗಿವೆ. ಹಳೆಯ ಕಥೆಗಳಲ್ಲಿ ಮಹಿಳೆಯರನ್ನು ಹೆಚ್ಚು ಮಿತಿಯೊಳಗಿನ ಪಾತ್ರಗಳಲ್ಲಿ ಚಿತ್ರಿಸಲಾಗಿದೆ. ಆದರೆ ನಂತರದ ಕಾಲದಲ್ಲಿ ಲೇಖಕರು ಮಹಿಳೆಯ ಸ್ವಾತಂತ್ರ್ಯ, ಆತ್ಮಗೌರವ ಮತ್ತು ಸ್ವಯಂ ನಿರ್ಧಾರ ಸಾಮರ್ಥ್ಯವನ್ನು ಒತ್ತಿ ಹೇಳಲು ಪ್ರಾರಂಭಿಸಿದರು. ಮಹಿಳೆಯರು ಕೇವಲ ಕುಟುಂಬದ ಪಾತ್ರಗಳಿಗೆ ಸೀಮಿತವಾಗದೆ ಸಮಾಜದಲ್ಲಿ ಸಮಾನ ಹಕ್ಕುಗಳಿಗಾಗಿ ಹೋರಾಡುವ ವ್ಯಕ್ತಿಗಳಾಗಿ ಚಿತ್ರಿಸಲ್ಪಟ್ಟರು.

ಕಥಾ ಸಾಹಿತ್ಯವು ಸಮಾಜದಲ್ಲಿ ನಡೆಯುವ ಬದಲಾವಣೆಗಳನ್ನು ಪ್ರತಿಬಿಂಬಿಸುವ ಪ್ರಮುಖ ಮಾಧ್ಯಮವಾಗಿ ಜಾತಿ ವ್ಯವಸ್ಥೆ, ಲಿಂಗ ಅಸಮಾನತೆ, ದಾರಿದ್ರ್ಯ, ಶಿಕ್ಷಣದ ಕೊರತೆ ಇತ್ಯಾದಿ ಸಮಸ್ಯೆಗಳ ವಿರುದ್ಧ ಲೇಖಕರು ತಮ್ಮ ಕಥೆಗಳ ಮೂಲಕ ಪ್ರಶ್ನೆ ಎತ್ತಿದ್ದಾರೆ. ಹೊಸ ಯುಗದ ಕಥೆಗಳು ಸಮಾನತೆ, ನ್ಯಾಯ ಮತ್ತು ಮಾನವೀಯ ಮೌಲ್ಯಗಳನ್ನು ಉತ್ತೇಜಿಸುತ್ತವೆ.

ಪರಂಪರೆಯಿಂದಲೂ ಸಮಾಜ ಹೆಣ್ಣನ್ನು ಶೋಷಿಸುತ್ತಾ ಬಂದಿದೆ. ಆದರೆ ಇದಕ್ಕೆ

* **ನಂದಿನಿ ಎಸ್.,** ಸಂಶೋಧನಾರ್ಥಿ, ಕನ್ನಡ ವಿಭಾಗ, ಜೈನ್ ಡೀಮ್ಡ್-ಟು-ಬಿ ವಿಶ್ವವಿದ್ಯಾಲಯ, ಬೆಂಗಳೂರು.

** **ಡಾ. ಶಿವಕುಮಾರ ಡಿ.ಸಿ.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೈನ್ ಡೀಮ್ಡ್-ಟು-ಬಿ ವಿಶ್ವವಿದ್ಯಾಲಯ, ಬೆಂಗಳೂರು.

ಒಂದು ಆಂದೋಲನದ ಆಯಾಮ ಸಿಕ್ಕಿದ್ದು ಮಾತ್ರ 19ನೇ ಶತಮಾನದಿಂದೀಚೆಗೆ. ಹೆಣ್ಣಿನ ಆಂತರ್ಯದ ಬದುಕನ್ನು ಕಟ್ಟಿಕೊಡುವಲ್ಲಿ ಸಿಮೋನ್ ದ ಬೋವಾ, ಕೇಟ್ ಮಿಲ್ಲೆಟ್, ಡೇನಿಯಲ್ ಡಿಫೋ ಇತ್ಯಾದಿ ಪಾಶ್ಚಿಮಾತ್ಯ ಮಹಿಳಾ ಚಿಂತಕರು ಸ್ತ್ರೀ ಸಂವೇದನೆಗೆ ತಾತ್ವಿಕ ರೂಪವನ್ನು ನೀಡಿದರು. ಸ್ತ್ರೀಯರನ್ನು ಸಮಾಜವು ದ್ವಿತೀಯ ದರ್ಜೆಯ ಪ್ರಜೆಯೆಂದು ನೋಡುತ್ತಿರುವುದನ್ನು ಬಹಳ ಸೂಕ್ಷ್ಮವಾಗಿ ಗುರುತಿಸಿದರು. ಹೆಣ್ಣಿನ ಅಂತರಾಳದ ಬಯಕೆ ಮತ್ತು ನೋವು–ನಲಿವು, ಸಂಕಟ–ಯಾತನೆಗಳನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸಿದ್ದನ್ನು ನೋಡಬಹುದಾಗಿದೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸ್ತ್ರೀಪರ ಚಿಂತಕಿಯರಾದ ಡಾ. ವಿಜಯಾ ದಬ್ಬೆ, ಬಿ.ಟಿ. ಲಲಿತಾ ನಾಯಕ್, ಅನುಪಮಾ ನಿರಂಜನ, ನೇಮಿಚಂದ್ರ, ಹೆಚ್. ಎಸ್. ಶ್ರೀಮತಿ, ಕೆ. ಶರೀಫಾ, ಸಾರಾ ಅಬೂಬಕರ್, ಬಿ. ಟಿ. ಜಾಹ್ನವಿ, ಎಮ್. ಎಸ್. ವೇದಾ ಮತ್ತು ಸುಕನ್ಯಾ ಮಾರುತಿ ಮುಂತಾದ ಅನೇಕರು ಸ್ತ್ರೀ ಸಂವೇದನೆಗಳನ್ನೂ ಹಾಗೂ ತಾನು ಬದುಕಿನುದ್ದಕ್ಕೂ ವಿವಿಧ ರೀತಿಯಲ್ಲಿ ಅನುಭವಿಸಿದಂತಹ ಸಮಸ್ಯೆಗಳನ್ನು ಸಾಹಿತ್ಯದಲ್ಲಿ ಅಳವಡಿಸಿಕೊಂಡು ಚರ್ಚಿಸಿರುವುದನ್ನು ನೋಡಬಹುದು.

**KEYWORDS:** ಅಸ್ತಿತ್ವ, ಸಂಸ್ಕೃತಿ, ಸ್ತ್ರೀವಾದ, ಸ್ತ್ರೀ ಸಂವೇದನೆ, ಅಸ್ಮಿತೆ, ಮೂರ್ತ, ತಾತ್ವಿಕ ರೂಪ, ಸಬಲೀಕರಣ.

---

ಸ್ತ್ರೀಯರ ಮನಸ್ಥಿತಿಯಲ್ಲಿ ಉಂಟಾದ ಬದಲಾವಣೆಯು ಕಥೆಗಳಲ್ಲಿ, ಅನೇಕ ಸ್ತ್ರೀಪರ ಚರ್ಚೆಗೆ ಒಳಪಟ್ಟಿದೆ. ಸಮಾಜವನ್ನು ತನ್ನ ಅಧಿಪತ್ಯದ ಮೂಲಕ ನಿಯಂತ್ರಣದಲ್ಲಿಟ್ಟುಕೊಂಡಿರುವ ಪುರುಷಪ್ರಧಾನ ವ್ಯವಸ್ಥೆ ಮತ್ತು ಮೌಲ್ಯಗಳು ಒಟ್ಟಾಗಿ ಮಹಿಳಾ ಕಥೆಗಳೆಲ್ಲದರ ಮುಖ್ಯಧಾರೆಯಲ್ಲಿ ಚರ್ಚೆಗೊಳ್ಳುತ್ತಿರುವ ವಿಷಯ. ವ್ಯಕ್ತಿಯ ಜೈವಿಕ ವ್ಯತ್ಯಾಸವೇ ಮೂಲ ಕಾರಣವಾಗಿ ಹುಟ್ಟಿಕೊಂಡ ಲಿಂಗ ತಾರತಮ್ಯವು, ಹೆಣ್ಣಿನ ಶೋಷಣೆಯ ಮೂಲ ಕೇಂದ್ರವನ್ನಾಗಿ ಗುರುತಿಸಿಕೊಂಡ ಲೇಖಕಿಯರು ಈ ಅಸಮಾನತೆಯನ್ನು ನಿರಂತರ ಕಾಪಾಡಿಕೊಂಡು ಬಂದ ಪುರುಷಪ್ರಧಾನ ವ್ಯವಸ್ಥೆಯ ದಮನಕಾರಿ ನೀತಿಯನ್ನು ಪ್ರತಿಭಟಿಸುತ್ತಾರೆ. ಹೆಣ್ಣಿನ ವ್ಯಕ್ತಿತ್ವದ ಸಹಜ ವಿಕಾಸಕ್ಕೆ ಅಗತ್ಯವಾದ ಪೂರಕ ವಾತಾವರಣವನ್ನು ಈ ಸಮಾಜದಲ್ಲಿ ನಿರ್ಮಾಣ ಮಾಡುವುದು ಲೇಖಕಿಯರ ಬರವಣಿಗೆಗಳ ಮುಖ್ಯ ಉದ್ದೇಶವಾಗಿದೆ. ಈ ಒಂದು ಹಿನ್ನೆಲೆಯಲ್ಲಿ ಭಾರತೀಯ ಸಾಂಸ್ಕೃತಿಕ ಪರಿಸರದಲ್ಲಿ ಪಾಶ್ಚಾತ್ಯ ಜ್ಞಾನದ ಅರಿವಿನೊಂದಿಗೆ ಸಾಹಿತ್ಯ ಕೃತಿಗಳ ಮಹಿಳಾ ಅಧ್ಯಯನದ ಅಗತ್ಯ ಕಂಡುಬರುತ್ತದೆ.

ಸಾಹಿತ್ಯ ಮತ್ತು ಸಮಾಜದಲ್ಲಿ ಇದ್ದ ಗ್ರಹಿಕೆಯ ನೆಲೆ ಮುಖ್ಯವಾಗಿ ಪುರುಷ ಕೇಂದ್ರಿತ ನೆಲೆಯಿಂದ ಬಂದಿದ್ದಾಗಿತ್ತು. ಆಯಾಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ವಲಯಗಳ ಮೇಲಿನ ಪುರುಷರ ಅಧಿಪತ್ಯವೂ ಪ್ರಧಾನ ಸಂಸ್ಕೃತಿಯ ವಾಹಿನಿಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದರಿಂದ ಬದುಕಿನ ಎಲ್ಲಾ

ಮೌಲ್ಯಗಳು ಪುರುಷಕೇಂದ್ರಿತ ಗ್ರಹಿಕೆಯ ಮುಷ್ಟಿಯಲ್ಲಿ ಉಳಿಯಿತು. ಸ್ತ್ರೀಯರ ಬದುಕಿನ ಸ್ವರೂಪ, ಸ್ವಭಾವ, ಗುರಿ ಎಲ್ಲವನ್ನು ತಾನೇ ನಿರ್ಧರಿಸಿತು. ಈ ಗ್ರಹಿಕೆಯಲ್ಲಿ ಸ್ತ್ರೀಯರ ಸ್ವಭಾವ, ಜೀವನ ಹಂತಗಳು ವಾಸ್ತವ ದೃಷ್ಟಿಕೋನದಿಂದ ದೂರ ಉಳಿದವು. ತನ್ನ ಬದುಕನ್ನು ವಿಸ್ಮೃತಿಗೆ ದೂಡಿದ ಸ್ತ್ರೀ ಪ್ರಜ್ಞೆಯನ್ನು ತನ್ನ ವಶದಲ್ಲಿರಿಸಿಕೊಂಡ ವ್ಯವಸ್ಥೆಯ ಈ ಹುನ್ನಾರವನ್ನು ಅರಿಯಲು ಮಹಿಳೆ ತನಗೆ ಶಿಕ್ಷಣ ಲಭ್ಯವಾಗುವವರೆಗೆ ಕಾಯಬೇಕಾಯಿತು. ಶಿಕ್ಷಣದಿಂದ ದೊರೆತ ಬೌದ್ಧಿಕ ಅರಿವಿನೊಂದಿಗೆ ಮಹಿಳೆ ತನ್ನ ವ್ಯಕ್ತಿತ್ವದ ಅಪಮೌಲ್ಯಕ್ಕೆ ಕಾರಣವಾದ ಪಿತೃಪ್ರಧಾನ ಮತ್ತು ಪುರುಷಪ್ರಧಾನ ಗ್ರಹಿಕೆಯ ಮೌಲ್ಯಗಳನ್ನು ಪ್ರಶ್ನಿಸುತ್ತಿದ್ದಾಳೆ. ತನ್ನ ವ್ಯಕ್ತಿತ್ವದ ಸಾಫಲ್ಯಕ್ಕೆ ವಿರೋಧವೆಂದು ಕಂಡುಬಂದಲ್ಲಿ, ಅವುಗಳನ್ನು ಮುರಿದು ಪರ್ಯಾಯ ವ್ಯವಸ್ಥೆಯ ಸ್ಥಾಪನೆಯನ್ನು ನಡೆಸುತ್ತಿದ್ದಾಳೆ.

ಲೇಖಕಿಯರು ಸಣ್ಣ ಕಥೆಯ ಮಿತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಆಧುನಿಕ ಕಾಲದ ಮಹಿಳೆಯ ಜೀವನ 'ಹೇಗಿದೆ' ಎನ್ನುವುದಕ್ಕಿಂತ ಮುಖ್ಯವಾಗಿ 'ಹೇಗಾಗಬೇಕಿದೆ' ಎನ್ನುವುದನ್ನು, ಅವಳ ಇರುವಿಕೆ ಮತ್ತು ಕಾಣಿಸುವಿಕೆ ನಡುವಿನ ಅಂತರ, ಅಧೀನ ನೆಲೆಯಲ್ಲಿ ಅವಳ ಅಭಿವ್ಯಕ್ತಿಯ ಅದೃಶ್ಯತೆ, ವಾಸ್ತವ ಜೀವನವನ್ನು ನಿಜದ ನೆಲೆಯಲ್ಲಿ ಚಿತ್ರಿಸುವಲ್ಲಿ ತೋರುವ ಪ್ರತಿರೋಧ, ಪೀಳಿಗೆಯ ಜೊತೆಗೆ ನಡೆದ ಸಂಘರ್ಷಗಳು, ಎದುರಾದ ಸಮಸ್ಯೆಗಳು, ಕಾಡಿದ ಗೊಂದಲಗಳು, ಪರಿಹಾರ ಕಂಡುಕೊಂಡ ರೀತಿ, ಸ್ವಾಭಿಮಾನವನ್ನು ಕಾಪಾಡುವಲ್ಲಿ ಎದುರಿಸಿದ ಸಮಸ್ಯೆಗಳು, ಆರ್ಥಿಕವಾಗಿ ದೊರೆತ ಸ್ವಾತಂತ್ರ್ಯ, ಸ್ವಾವಲಂಬನೆಯ ಬದುಕು ಕಲಿಸಿದ ಪಾಠ, ಒಟ್ಟಿನಲ್ಲಿ ಆಧುನಿಕ ಸಮಾಜದಲ್ಲಿ ಅವಳ ಸ್ಥಾನವೇನು, ಜಾಗತೀಕರಣದ ಸಮಕಾಲೀನ ಸಂದರ್ಭದಲ್ಲಿ ಪ್ರಭಾವ ಅವಳ ಮೇಲೆ ಮತ್ತು ಕುಟುಂಬದ ಮೇಲೆ ಎಷ್ಟರಮಟ್ಟಿಗೆ ಆಗಿದೆ ಮುಂತಾದವುಗಳ ಬಗ್ಗೆ ಕಥೆಗಳಲ್ಲಿ ಚರ್ಚಿಸಿದ್ದಾರೆ.

ಸನಾತನ ಕಾಲದಿಂದ ಸಮಾಜದಲ್ಲಿ ರೂಢಿಯಲ್ಲಿರುವ ನಂಬಿಕೆ, ಸಂಪ್ರದಾಯಗಳು ರೂಪಿಸಿದ ಸ್ತ್ರೀಯ ಮಾದರಿಗಳು, ಆಧುನಿಕ ಕಾಲದಲ್ಲಿ ಬಣ್ಣಗೆಟ್ಟು ಅಪರಿಚಿತವೆನಿಸುವಂತಾಗಿದೆ. ಅದೇ ಕ್ಷಣದಲ್ಲಿ ನಮ್ಮ ಕಣ್ಣೆದುರು ನಿಲ್ಲುತ್ತಿರುವ ಹೊಸ ಮಾದರಿಗಳು ನಮಗೆ ಪರಕೀಯವೆನಿಸುತ್ತದೆ. ಇಂತಹ ಸಂಕ್ರಮಣ ಸ್ಥಿತಿಯಲ್ಲಿ ಗೊಂದಲಗಳು, ಸಂದೇಹಗಳು ಉಂಟಾಗುವುದು ಸಹಜ. ಕೆಡುವುವುದು ಸುಲಭ, ಆದರೆ ಕಟ್ಟುವುದು ಕಷ್ಟ. ಸಮಾಜದಲ್ಲಿ ಉಂಟಾದ ಕಂದಕಗಳಿಗೆ ಸೇತುವೆ ಕಟ್ಟುವ, ಬಿರುಕುಗಳಿಗೆ ಬೆಸುಗೆ ಹಾಕುವ ಕೆಲಸವನ್ನು ಪ್ರಜ್ಞಾವಂತರೆಲ್ಲರೂ ಮಾಡುತ್ತಿದ್ದಾರೆ. ಮುಂದುವರಿದು ಅನ್ಯ ಸಂಸ್ಕೃತಿಯ ಪ್ರಭಾವದಿಂದ ಇಂದು ಒಟ್ಟು ಸಾಮಾಜಿಕ ಬದುಕಿನ ಹಳೆಯ ವಿಗ್ರಹಕ್ಕೆ ಚಿನ್ನದ ಗಿಲೀಟಿನಂತೆ ಕಾಣುತ್ತಿದೆ. ಸ್ಥಿತ್ಯಂತರಗೊಂಡ ಬದುಕಿನಲ್ಲಿ ಆಧುನಿಕ ಮಹಿಳೆಯರು ಎದುರಿಸುವ ಸಂಕೀರ್ಣ ಸಮಸ್ಯೆಗಳನ್ನು ನಮ್ಮ ಮುಂದೆ ಇಡುತ್ತವೆ. ಸನಾತನ ಸ್ತ್ರೀ ಮಾದರಿಯ ಸ್ಥಾನದಲ್ಲಿ ಆಧುನಿಕ ಮಾದರಿಯ ಸ್ತ್ರೀ ಸಮಾಜ ಅಥವಾ ಸಾಹಿತ್ಯದಲ್ಲಾಗುತ್ತಿರುವ ಈ ಬದಲಾವಣೆಯು ಕನ್ನಡದಲ್ಲಿ ನಂಜನಗೂಡು ತಿರುಮಲಾಂಬರಿಂದ ತೊಡಗಿ ಇತ್ತೀಚಿನ ವೈದೇಹಿ, ಎಂ. ಎಸ್.

ವೇದಾ, ನೇಮಿಚಂದ್ರ ಮೊದಲಾದವರ ಕಥೆಗಳಲ್ಲಿ ಪ್ರತಿಫಲಿಸತೊಡಗಿದೆ. ಸಣ್ಣ ಕಥೆಗಳಲ್ಲಿ ಸ್ತ್ರೀ ಪ್ರಜ್ಞೆಯು ವಿವಾಹ ಮತ್ತು ಕುಟುಂಬದ ತಾತ್ವಿಕ ನಿಲಯದ ಪರಿಧಿಯೊಳಗೆ ಪುರುಷಾಧೀನ ಪ್ರಜ್ಞೆಯಾಗಿ ಕಾಣಿಸಿಕೊಂಡರೆ, ನಂತರದ ಕಥೆಗಳಲ್ಲಿ ಈ ವರದಿಯನ್ನು ದಾಟಿ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಸ್ವಾವಲಂಬನೆಯ ನೆಲೆಗಳಲ್ಲಿ ಸ್ತ್ರೀ ಪ್ರಜ್ಞೆ ವಿಕಾಸವಾದುದು ಕಂಡುಬರುತ್ತದೆ.

ಆಧುನಿಕ ಕಾಲದ ಮಹಿಳೆಗೆ ಸಮಕಾಲೀನ ಸಂದರ್ಭದಲ್ಲಿ ಉದ್ಯೋಗವೆನ್ನುವುದು ಆರ್ಥಿಕ ಗಳಿಕೆಗೆ ದೊರೆತ ಅವಕಾಶವಾಗಿದ್ದು, ಕುಟುಂಬದ ಮತ್ತು ಉದ್ಯೋಗ ಕ್ಷೇತ್ರದ ಒಂದೇ ಕಾಲದಲ್ಲಿ ಎರಡೆರಡು ಜವಾಬ್ದಾರಿಗಳನ್ನು ಹೊರಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕುಟುಂಬವೇ ಆಕೆಯ ಮೊದಲ ಆದ್ಯತೆಯಾಗಬೇಕಾದ ಅನಿವಾರ್ಯತೆಯಲ್ಲಿ ಮಹಿಳೆ ಇದ್ದಾಳೆ. ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳಲ್ಲಿ ಈ ಸಮಸ್ಯೆ ವಿಭಿನ್ನವಾಗಿ ಮಹಿಳೆಯರನ್ನು ಕಾಡುತ್ತಿರುವ ಸಂಗತಿ. ಈ ಸ್ಥಿತಿಯಿಂದಲೇ ಮೂಡಿಬರುತ್ತಿರುವ ಸ್ವಪ್ರಜ್ಞೆಯಿಂದ ಹೆಣ್ಣು ತನ್ನ ಗ್ರಹಿಕೆಯಲ್ಲಾದ ಪಲ್ಲಟವನ್ನು ಹಿಂದಿಗಿಂತ ಭಿನ್ನವಾಗಿ ಲೋಕವನ್ನು ನೋಡುತ್ತಿರುವ ಬಗೆಯನ್ನು ಕಥನಗಳಲ್ಲಿ ಅಭಿವ್ಯಕ್ತಿಸುತ್ತಿದ್ದಾಳೆ. ಸ್ಥಾಪಿತ ದೃಷ್ಟಿಕೋನಗಳನ್ನು ಮೀರಿನಿಂತು ತನ್ನ ಬದಲಾದ ಸ್ವಪ್ರಜ್ಞೆಯನ್ನು ಬದಲಾದ ತನ್ನ ಹೊಸ ಅರಿವಿನ ಬಗ್ಗೆ ಸಮಾಜಕ್ಕೆ ತಿಳುವಳಿಕೆ ಮೂಡಿಸಲು ಪ್ರಯತ್ನಿಸುತ್ತಿದ್ದಾಳೆ. ಈ ಮೂಲಕ ವ್ಯವಸ್ಥೆಯ ಬದಲಾವಣೆಗೆ ಶ್ರಮಿಸುತ್ತಿದ್ದಾಳೆ. ಈ ತಿಳುವಳಿಕೆಯೇ ಹಿಂದಿನ ಹೆಣ್ಣಿನ ಅಭಿವ್ಯಕ್ತಿಯ ಸ್ವರೂಪವನ್ನು ನಿರ್ಧರಿಸಿದೆ.

ಸಮಾನತೆಯ ಬಿಡುಗಡೆಯ ಆಶಯ ಮಹಿಳೆಯರ ಬರವಣಿಗೆಗಳಲ್ಲಿ ಚರ್ಚೆಗೊಳಗಾದ ಸಂಗತಿ. ನೇಮಿಚಂದ್ರ, ಡಾ. ಎನ್. ಗಾಯತ್ರಿಯವರು 'ಸ್ತ್ರೀಯರು ಪುರುಷನನ್ನು ಅನುಸರಿಸುವುದೇ ಸಮಾನತೆಯಲ್ಲ, ಆಕೆ ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು' ಎನ್ನುವ ಧೋರಣೆಯವರು. ವೈದೇಹಿಯವರು ಕೂಡ ಹೆಣ್ಣನ್ನು ತನ್ನೆಲ್ಲ ಸತ್ವ ಬಲದಿಂದಲೇ ಕಥೆಗಳಲ್ಲಿ ನಿರೂಪಿಸುತ್ತಾರೆ. ಸ್ವಂತಿಕೆಯ ಅರಿವು ಬೆಳೆಯುತ್ತಾ ಹೋದಂತೆ, ಅನುಕರಣೆಯಿಲ್ಲದ, ಸಮಾನತೆಯ ನಡವಳಿಕೆಯ ಆರಂಭವಾಗುತ್ತದೆ ಎನ್ನುವ ನಿಲುವು ಲೇಖಕಿಯರದ್ದು. ಬೌದ್ಧಿಕ ಮಟ್ಟದಲ್ಲಿ ಗಟ್ಟಿಯಾಗಿ ಆರಂಭವಾದ ಈ ನಡೆಯನ್ನು ಸಮಾಜಕ್ಕೆ ದಾಟಿಸಲು ಲೇಖಕಿಯರು ಕಥೆಗಳ ಮೂಲಕ ನಡೆಸಿದ ಪ್ರಯತ್ನವು ಈ ಸಂಶೋಧನೆಯಲ್ಲಿ ಮಹತ್ವವನ್ನು ಪಡೆಯುತ್ತದೆ.

ಸ್ತ್ರೀ ಪ್ರಜ್ಞೆಯು ಸಮಾಜ ಪ್ರಜ್ಞೆಯ ಭಾಗ. ಪ್ರಜ್ಞೆ ಎನ್ನುವುದು ಒಂದು ಮನೋಸ್ಥಿತಿ. ಒಂದು ಆಲೋಚನಾ ಕ್ರಮಕ್ಕೆ ಸಂಬಂಧಿಸಿದ್ದರಿಂದ ಸ್ತ್ರೀ ಪ್ರಜ್ಞೆ ಎನ್ನುವುದನ್ನು ಮನಸ್ಥಿತಿಯಲ್ಲಿ ಉಂಟಾಗುವ ಅರಿವಿನ ಸೂಕ್ಷ್ಮ ಸಂವೇದನೆ ಎನ್ನುವ ಅಮೂರ್ತ ಅರ್ಥದಲ್ಲಿ ಭಾವಿಸಲಾಗಿದೆ. ಪುರುಷ ಗ್ರಹಿಕೆಯ ಅಪಾಯಗಳನ್ನು ದಾಟುವ ಪ್ರಜ್ಞೆ, ಸ್ತ್ರೀಯರು ತಮ್ಮ ವ್ಯಕ್ತಿತ್ವದ ಸಾಫಲ್ಯಕ್ಕೆ ತಡೆಗಳಾದ ದೌರ್ಬಲ್ಯಗಳನ್ನು,

ವ್ಯವಸ್ಥೆ ಹೇರಿದ ಮಿತಿಗಳನ್ನು ಮೀರಿ ನಿಲ್ಲಲು ಅಗತ್ಯವಾದ ಮನಸ್ಥಿತಿ, ಆಲೋಚನಾ ಕ್ರಮವನ್ನು ಸಾಧಿಸುವುದೇ ಸ್ತ್ರೀ ಸತ್ವ ಎನಿಸುತ್ತದೆ.

ಮಹಿಳೆಯು ಸಮಾಜದ ಒಂದು ಘಟಕ. ಸಮಾಜದ ಇನ್ನಿತರ ಘಟಕಗಳು, ಸಂಸ್ಥೆಗಳು ಈ ಎಲ್ಲವನ್ನು ಒಳಗೊಂಡಂತೆ ಮಹಿಳೆಯ ವ್ಯಕ್ತಿತ್ವವು ವ್ಯಾಖ್ಯಾನಗೊಳ್ಳುತ್ತಿರುತ್ತದೆ. ಹಾಗೆಯೇ ಸ್ತ್ರೀವಾದವು ಸಾಹಿತ್ಯವನ್ನು ಚಾರಿತ್ರಿಕ ನಿರ್ಮಿತಿಯಾಗಿ, ಸಾಂಸ್ಕೃತಿಕ ಉತ್ಪಾದನೆಯಾಗಿ ಪರಿಭಾವಿಸುತ್ತದೆ. ಮಹಿಳೆ ಮತ್ತು ಸಾಹಿತ್ಯ ಕುರಿತ ಸ್ತ್ರೀವಾದದ ಈ ಎರಡು ನಿಲುವುಗಳು ಸೇರಿಕೊಂಡು ಲೇಖಕಿ ಹಾಗೂ ಅವಳ ಲೇಖನ ಚಟುವಟಿಕೆಯನ್ನು ಸಾಮಾಜಿಕ ಉತ್ಪನ್ನವಾಗಿ ವ್ಯಾಖ್ಯಾನಿಸುತ್ತದೆ. ಅಂತಹ ಸಾಮಾಜಿಕ ಉತ್ಪಾದನೆಯ ವಿಶ್ಲೇಷಣೆಗೆ ಸಾಮಾಜಿಕ ಪರಿಕರಗಳು ಅತ್ಯಗತ್ಯವಾಗಿವೆ.

ಆಧುನಿಕ ಸಮಾಜದಲ್ಲಿ ಶಿಕ್ಷಣ, ಉದ್ಯೋಗ ಹಾಗೂ ಆರ್ಥಿಕ ಸ್ವಾವಲಂಬನೆ ಮಹಿಳೆಯರ ಪಾಲಿಗೆ ಬಿಡುಗಡೆಯ ದಾರಿಗಳೆಂದು ತಿಳಿದುಕೊಳ್ಳಲಾಗಿದೆ. ಆದರೆ ಮಹಿಳೆಗೆ ಇವು ಮೂರು ಲಭ್ಯವಿದ್ದರೂ ಅವಳ ಸ್ಥಿತಿ ಸುಧಾರಿಸಿಲ್ಲ. ಸಾರ್ವಜನಿಕ ಬದುಕನ್ನು ಆರಿಸಿಕೊಂಡಿರುವ ಮಹಿಳೆಯರ ಪಾಲಿಗೆ ಪೂರಕ ಕೌಟುಂಬಿಕ ವಾತಾವರಣ ನಿರ್ಮಾಣವಾಗಿಲ್ಲ. ಬದಲಾದ ಕಾಲ, ಪರಿಸರಗಳಲ್ಲಿ ಪರಿಷ್ಕಾರಗೊಂಡ ಮೌಲ್ಯಗಳು ಕಾಣಿಸಿಕೊಂಡಿದ್ದು ಅವುಗಳು ಮಹಿಳೆಯರಲ್ಲಿ ಹೊಸ ಸ್ವರೂಪದ ಸಮಸ್ಯೆಗಳನ್ನು ಹುಟ್ಟುಹಾಕಿವೆ. ಪರಂಪರೆಯ ಶೋಧದಲ್ಲಿ ತೊಡಗಿದ ಲೇಖಕಿಯರು ಪಿತೃ ಮೌಲ್ಯಗಳನ್ನು ಪ್ರಶ್ನಿಸಿ ಪರ್ಯಾಯ ಮೌಲ್ಯಗಳನ್ನು ಸ್ಥಾಪಿಸುತ್ತಿರುವ ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ಕೂಡ ಮಹಿಳೆಯ ಆಸಕ್ತಿಗಳು, ಅಭಿರುಚಿಗಳು, ಈಡೇರಲಾರದ ಒತ್ತಡ ಸಮಾಜದಲ್ಲಿರುವುದನ್ನು ಕಾಣಬಹುದಾಗಿದೆ. ಸಮಾಜದಲ್ಲಿ ಅಥವಾ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಸ್ತ್ರೀಯ ಬಗೆಗಿನ ಪ್ರತಿಕ್ರಿಯೆಗಳು ಆಕೆ ಹೆಣ್ಣು ಎಂಬ ಗುರುತಿನೊಂದಿಗೆ ನೇರ ಸಂಬಂಧವನ್ನು ಪಡೆದುಕೊಂಡಿವೆ. ಹೆಣ್ಣಿಗೆ ದತ್ತವಾದ ಸಾಮಾಜಿಕ ಪರಿಸರದಲ್ಲಿ ಪುರುಷ ಸಮಾಜದಿಂದ ಒದಗಿ ಬರುವ ನಿಯಂತ್ರಣ ನಿರ್ದೇಶನಗಳ ಹಿನ್ನೆಲೆಯಲ್ಲಿ ಆಕೆ ಕ್ರಿಯಾಶೀಲಳಾಗುತ್ತಾಳೆ. ಜಾಗತೀಕರಣದ ಸಂದರ್ಭದಲ್ಲಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹಣದ, ಇಲ್ಲವೇ ಲಾಭದ ದೃಷ್ಟಿಕೋನ ಬೆಳೆದು ಬರುತ್ತಿದ್ದು ವ್ಯವಹಾರಗಳು ಸಂಬಂಧಗಳು ಮೌಲ್ಯಗಳು ಎಲ್ಲವೂ ಲಾಭದ ಹಿನ್ನೆಲೆಯಲ್ಲಿ ವ್ಯಾಖ್ಯಾನಗೊಳ್ಳುತ್ತಿವೆ. ಸಂಬಂಧಗಳು, ಮೌಲ್ಯಗಳು ಶಿಥಿಲಗೊಳ್ಳುತ್ತಿರುವ ಈ ಹಂತದಲ್ಲಿ ಮಹಿಳೆ ಮತ್ತೆ ದೇಹ ಮಾತ್ರವಾಗಿ ಬಳಕೆಯಾಗುತ್ತಿದ್ದು ಆಕೆಯ ಪ್ರಜ್ಞೆಯನ್ನು ಮತ್ತೆ ವ್ಯವಸ್ಥೆಯು ವಶಪಡಿಸಿಕೊಳ್ಳುತ್ತಿದೆ. ಪರಂಪರಾಗತ ಮೌಲ್ಯಗಳು ಮಹಿಳಾ ವಿರೋಧಿಯಾಗಿದ್ದಂತೆ ಜಾಗತೀಕರಣ ಮೌಲ್ಯಗಳು ಕೂಡ ಮಹಿಳಾ ವಿರೋಧಿಯಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಇಂದಿನ ಮಹಿಳೆಯ ಬದುಕು ವಿಚಿತ್ರ ತಳಮಳಗಳಿಗೆ ಒಳಗಾಗಿದೆ. ಮಹಿಳೆಯರಿಗೆ ಒದಗಿ ಬರುವ ಸಮಸ್ಯೆಗಳು, ಯಾವತ್ತೂ ಲೇಖಕಿಯರನ್ನು ಕಾಡಿದ ವಿಷಯಗಳು ಕಥೆಗಳ ಮೂಲಕ ಒಂದೊಂದು ಸಮಸ್ಯೆಗಳನ್ನು ವಿಶ್ಲೇಷಣೆ ನಡೆಸುವ ಲೇಖಕಿಯರು ತಮಗೆ ದತ್ತವಾದ ಸಮಾಜದ

ಪರಿಮಿತಿಯಲ್ಲಿಯೇ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ಮಹಿಳೆಯನ್ನು ಬೆಳೆಸಿದ್ದಾರೆ. ಕೆಲವು ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವಾಗದಿದ್ದರೂ ನಾಳಿನ ನಿರೀಕ್ಷೆ ಕನಸುಗಳು ಪಾತ್ರಗಳ ಜೀವಂತಿಕೆಯನ್ನು ಉಳಿಸಿಕೊಳ್ಳುವಲ್ಲಿ ಸಫಲವಾಗಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸ್ತ್ರೀಪರ ಚಿಂತಕಿಯರಾದ ಡಾ. ವಿಜಯಾ ದಬ್ಬೆ, ಬಿ.ಟಿ. ಲಲಿತಾ ನಾಯಕ್, ಅನುಪಮಾ ನಿರಂಜನ, ನೇಮಿಚಂದ್ರ, ಹೆಚ್. ಎಸ್. ಶ್ರೀಮತಿ, ಕೆ. ಶರೀಫಾ, ಸಾರಾ ಅಬೂಬಕರ್, ಬಿ. ಟಿ. ಜಾಹ್ನವಿ, ಎಮ್. ಎಸ್. ವೇದಾ ಮತ್ತು ಸುಕನ್ಯಾ ಮಾರುತಿ ಮುಂತಾದ ಅನೇಕರು ಸ್ತ್ರೀ ಸಂವೇದನೆಗಳನ್ನೂ ಹಾಗೂ ತಾನು ಬದುಕಿನುದ್ದಕ್ಕೂ ವಿವಿಧ ರೀತಿಯಲ್ಲಿ ಅನುಭವಿಸಿದಂತಹ ಸಮಸ್ಯೆಗಳನ್ನು ಸಾಹಿತ್ಯದಲ್ಲಿ ಅಳವಡಿಸಿಕೊಂಡು ಚರ್ಚಿಸಿರುವುದನ್ನು ನೋಡಬಹುದು.

ಆರಂಭದ ವಿಭಜನೆಯ ನೆಲೆಯಲ್ಲಿ ಗಂಡು ಹೆಣ್ಣುಗಳ ನಡುವೆ ಸಹಚರ್ಯವಿತ್ತು. ಇವರ ಸಂಬಂಧ ಗೆಳೆತನದ ನೆಲೆಯದ್ದು. ಮಾನವನ ಪ್ರಜ್ಞೆಯಲ್ಲಿರುವ ಅಧಿಪತ್ಯದ ಭಾವದಿಂದ ಅಸಮಾನತೆಯ ಭಾವ ಉಗಮವಾಗಿದೆ ಎನ್ನುವುದನ್ನು ಕಥೆಗಳ ಅಧ್ಯಯನದಿಂದ ತಿಳಿಯಲು ಸಾಧ್ಯವಾಗುತ್ತದೆ. ಅಧಿಪತಿಯಾಗಬೇಕೆಂಬ ಅಪೇಕ್ಷೆ ಇತರರನ್ನು ತನ್ನ ಹಿಡಿತದಲ್ಲಿರಿಸಲು ಪ್ರೇರೇಪಿಸುತ್ತದೆ. ಕ್ರಮೇಣ ಕುಟುಂಬ ಜೀವನದಲ್ಲಿ ಅಧಿಕಾರದ ದಂಡವನ್ನು ಹೆಗಲಿಗೇರಿಸಿಕೊಂಡ ಪುರುಷ, ಸ್ತ್ರೀಯನ್ನು ತನ್ನ ಅಧೀನತೆಯಲ್ಲಿರಿಸಿ ಆಕೆಯ ಪ್ರಜ್ಞೆಯನ್ನು ಹೊಸ್ತಿಲಲ್ಲಿರಿಸಿ ಸ್ವಾಭಿಮಾನ ಎಚ್ಚರಗೊಳ್ಳದಂತೆ ನಾಜೂಕಾಗಿ ಕಾರ್ಯತಂತ್ರಗಳನ್ನು ರೂಪಿಸಿ ಮಹಿಳೆಯರಿಗೆ ಸಮಾಜದ ಜೊತೆಗೆ ಬೆರೆಯುವ ಅವಕಾಶವನ್ನೇ ಇಲ್ಲವಾಗಿಸಿದ. ತನ್ನ ಜೀವನದ ಪರಮಾವಧಿ ಸಮಯವನ್ನು ಮನೆಯ ನಾಲ್ಕು ಗೋಡೆಗಳ ಒಳಗೆ ಮೀಸಲಿಟ್ಟ ಮಹಿಳೆಗೆ ಸಮಾಜದಲ್ಲಿ ಅಥವಾ ಸಾಹಿತ್ಯದಲ್ಲಿ ತನ್ನ ವ್ಯಕ್ತಿತ್ವದ ಚಿತ್ರಣವು ಸಹಜವಾಗಿಲ್ಲ. ಅದು ಪುರುಷ ಗ್ರಹಿಕೆಯಂತೆ ಅಪನಿರ್ಮಾಣ ಹೊಂದಿದೆ ಎಂದು ತಿಳಿಯಲು ಅನೇಕ ವರ್ಷಗಳೇ ಬೇಕಾಯಿತು. ಈ ಅರಿವು ಉಂಟಾಗಲು ಮಹಿಳೆಯ ಪಾಲಿಗೆ ತೆರೆದುಕೊಂಡ ಶಿಕ್ಷಣ ಕ್ಷೇತ್ರ ಒಂದು ಕಾರಣವಾದರೆ, ಪುರುಷ ಪ್ರಧಾನ ವ್ಯವಸ್ಥೆಯು ಅವಳ ಮೇಲೆ ಉಂಟುಮಾಡಿದ ಒತ್ತಡದಿಂದ ಅಸ್ವಸ್ಥತೆಗೊಳ್ಳುತ್ತಿದ್ದ ಅವಳ ಮನಸ್ಥಿತಿ ಬಿಡುಗಡೆಯ ಕಡೆಗೆ ತುಡಿಯಲು ಆರಂಭವಾದದ್ದು ಇನ್ನೊಂದು ಕಾರಣವಾಗಿದೆ. ವಸಾಹತುಶಾಹಿಯ ಪ್ರವೇಶದೊಂದಿಗೆ ಮಹಿಳೆ ಶಿಕ್ಷಣ ಕ್ಷೇತ್ರಕ್ಕೆ ತೆರೆದುಕೊಂಡಳಾದರೂ 1960–70ರ ದಶಕದಲ್ಲಿ ಪಾಶ್ಚಾತ್ಯ ಪ್ರಭಾವದಿಂದ ಭಾರತದಲ್ಲಿ ಹುಟ್ಟಿಕೊಂಡ ಸ್ತ್ರೀವಾದವು ಒದಗಿಸಿದ ಬೌದ್ಧಿಕ ಅರಿವು ಪ್ರಜ್ಞಾಪೂರ್ವಕವಾಗಿಯೇ ಮಹಿಳೆಯನ್ನು ತನ್ನ ಕುರಿತು ಚಿಂತಿಸುವಂತೆ ಮಾಡಿತು. ಸಮಾಜ ಹಾಗೂ ಸಾಹಿತ್ಯದ ಎಲ್ಲಾ ಕ್ಷೇತ್ರಗಳಲ್ಲಿಯೂ ತನ್ನ ಕೇಂದ್ರದಲ್ಲಿ ತಾನು ಇಲ್ಲದಿರುವ ವಿಚಾರವು ಪುರುಷ ಪ್ರಧಾನ ವ್ಯವಸ್ಥೆಯ ಸ್ತ್ರೀ ವಿರೋಧಿ ಧೋರಣೆಗಳ ಬಗ್ಗೆ ಆಲೋಚಿಸುವಂತೆ ಮಾಡಿತು. ಈ ಅರಿವಿನಿಂದ ಪರಂಪರೆಯ ಶೋಧ ನಡೆಸಿದಾಗ ಮಹಿಳೆಯರಿಗೆ ಚರಿತ್ರೆಯೇ

ಇಲ್ಲ, ಇದ್ದರೂ ಅವಳು ಚರಿತ್ರೆಯಲ್ಲಿ ಕಳೆದು ಹೋಗಿದ್ದಾಳೆ ಎನ್ನುವ ವಿಚಾರವು ತಿಳಿದು ಬಂದು ಸಾಹಿತ್ಯದ ಪ್ರಧಾನ ವಾಹಿನಿಯಲ್ಲಿ ಸ್ಥಾನ ಪಡೆಯದೆ ಹೋದ ಮಹಿಳೆಯರ ಬರಹಗಳ ಶೋಧ ಕ್ರಿಯೆ ಆರಂಭವಾಯಿತು.

ಅನ್ಯಾಯವನ್ನು ವಿರೋಧಿಸುವ ಶೋಷಣೆಯನ್ನು ಪ್ರತಿಭಟಿಸುವ ಮನೋಬಲ ಹಾಗೂ ಸಾಮರ್ಥ್ಯವುಳ್ಳವಳೇ ಆಧುನಿಕ ಮಾದರಿ ಮಹಿಳೆ ಎನ್ನುವ ಚಿತ್ರಣ ಕನ್ನಡ ಕಥೆಗಳಲ್ಲಿ ಮೂಡಿಬಂದಿದೆ. ಸಂಸ್ಕೃತಿಯ ಗ್ರಹಿಕೆಯಲ್ಲಿ ಇಂತಹ ಆಧುನಿಕ ಮಾದರಿಯ ಮಹಿಳೆ ರೂಪು ತಳೆದಿದ್ದಾಳೆ. ಮಹಿಳೆಯರ ಹಿತರಕ್ಷಣೆ ಎಂದರೆ ಒಂದು ಕುಟುಂಬದ, ಒಂದು ಸಮಾಜದ ಹಿತರಕ್ಷಣೆಯಾಗಿರುವುದರಿಂದ ಸಾಮಾಜಿಕ ಮನಃಪರಿವರ್ತನೆಯಿಂದ ಮಾತ್ರ ಮಹಿಳೆಯರ ಸ್ಥಿತಿ ಉತ್ತಮಗೊಳ್ಳಲು ಸಾಧ್ಯ ಎನ್ನುವುದನ್ನು ಕನ್ನಡ ಕಥೆಗಳು ಧ್ವನಿಸಿವೆ. ಸಮಾಜ ಪ್ರಗತಿ ಹೊಂದಬೇಕಿದ್ದರೆ ಪುರುಷರ ಜೊತೆಗೆ ಮಹಿಳೆಯರ ಪ್ರಗತಿಯು ಸಾಧ್ಯವಾಗಬೇಕು. ಮಹಿಳೆಯ ವ್ಯಕ್ತಿತ್ವದ ವಿಕಾಸವಾಗಬೇಕೆಂದರೆ ಅವಳಲ್ಲಿ ಅರಿವು ಹುಟ್ಟಬೇಕಿದ್ದರೆ ಅದಕ್ಕೆ ಶಿಕ್ಷಣ ಅವಶ್ಯಕ. ಶಿಕ್ಷಣದ ಅವಕಾಶಗಳಿಂದಲೇ ಮಹಿಳೆಯನ್ನು ದೂರವಿರಿಸಿದ ಯಜಮಾನ ಸಂಸ್ಕೃತಿಯು ಏಕಮುಖಿಯಾಗಿ ತನ್ನ ಪರವಾಗಿ ತಾನೇ ಸೃಷ್ಟಿ ಮಾಡಿದ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುವ ವಾಹಕಗಳಾಗಿ ಸ್ತ್ರೀ ಲೋಕವನ್ನು ಹಲವು ನಿರ್ಬಂಧಗಳ ನಡುವೆ ಇಟ್ಟುಬಿಟ್ಟಿದೆ. ಮಾತ್ರವಲ್ಲ ತನ್ನ ನಿರ್ದೇಶನದ ಪ್ರಕಾರ ಕ್ರಿಯಾಶೀಲವಾಗುವಂತೆ ಮಾಡಿದೆ. ಆದ್ದರಿಂದಲೇ ಕ್ರಿಯಾಶೀಲ ಹೆಣ್ಣಿನ ಪಾತ್ರಗಳು ಕಥೆಗಳಲ್ಲಿ ಬಂದಿದ್ದರೂ ಸಾಮಾಜಿಕವಾಗಿ ಉಪಯೋಗರಹಿತವಾಗಿಬಿಡುತ್ತವೆ. ಇಂತಹ ಪಾತ್ರಗಳು ಸಮಾಜದಿಂದ ಬೇರ್ಪಟ್ಟು ಒಂಟಿಯಾಗಿ ಬಿಡುತ್ತವೆ. ಈ ಅರಿವನ್ನು ಮೂಡಿಸುವ ಪ್ರಯತ್ನವನ್ನು ಕನ್ನಡ ಕಥೆಗಳು ಮಾಡಿವೆ.

ಮಹಿಳೆಯು ವೈಯಕ್ತಿಕವಾಗಿ ಬಲಿಷ್ಠಳಾಗುವಲ್ಲಿ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಶೋಷಣೆಯಿಂದ ಮಹಿಳೆ ಮುಕ್ತಳಾಗಬೇಕಿದ್ದರೆ ಅವರಿಗೆ ಮೊದಲಾಗಿ ಶಿಕ್ಷಣ ಲಭಿಸುವಂತಾಗಬೇಕು ಎನ್ನುವುದು ಲೇಖಕಿಯರೆಲ್ಲರ ಒಕ್ಕೊರಳಿನ ಹಂಬಲ. ಶಿಕ್ಷಣದಿಂದ ದೊರಕುವ ಅರಿವು, ಆತ್ಮವಿಶ್ವಾಸಗಳು, ಮಹಿಳೆಯ ವ್ಯಕ್ತಿತ್ವದ ಸಾಫಲ್ಯದ ದಾರಿಗಳು ಎನ್ನುವುದು ಲೇಖಕಿಯರ ನಿಲುವು. ಹೊಸ ಆರ್ಥಿಕ ನೀತಿಯ ಜಾರಿಯಿಂದಾಗಿ ಜಾಗತೀಕರಣಕ್ಕೆ ಅವಕಾಶವಾಯಿತು. ಜಾಗತೀಕರಣದ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರವು ಮುಕ್ತವಾಗಿ ಮಹಿಳೆಯರಿಗೆ ತೆರೆದುಕೊಂಡಿತು. ಈ ಸಂದರ್ಭದಲ್ಲಿ ಮಹಿಳೆಯರು ತಾಂತ್ರಿಕ ಶಿಕ್ಷಣ ಪಡೆದು ಉನ್ನತ ಉದ್ಯೋಗಗಳಲ್ಲಿ ನಿರತರಾಗಿರುವುದನ್ನು ಕಥೆಗಳು ದಾಖಲಿಸಿವೆ. ಇಷ್ಟೆಲ್ಲ ಔದ್ಯೋಗಿಕ ಬೆಳವಣಿಗೆಯನ್ನು ಸಾಧಿಸಿದ್ದರೂ, ಮಹಿಳೆಯರು ಅಭಿವೃದ್ಧಿಯಲ್ಲಿ ಪುರುಷನಿಗೆ ಸಮಾನವಾಗಿ ಕಾಣಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಕಾರಣ ಸಾಮಾಜಿಕ ನಿಯಂತ್ರಣ, ಆರ್ಥಿಕ ನಿಯಂತ್ರಣ, ನಿರ್ಧಾರ ಕೈಗೊಳ್ಳುವಿಕೆಗೆ ಇರುವ ನಿಯಂತ್ರಣ, ಆಯ್ಕೆ ಸ್ವಾತಂತ್ರ್ಯಗಳು ಇಲ್ಲದಿರುವುದಾಗಿದೆ. ಶಿಕ್ಷಣವು ಮಹಿಳೆಯ ರಾಜಕೀಯ, ಆರ್ಥಿಕ ಬೆಳವಣಿಗೆಗೆ, ಸ್ವಾವಲಂಬನೆಗೆ ಸಹಕಾರ ನೀಡುತ್ತದೆಯಾದರೂ ಅವರ ಮೂಲ ಸ್ಥಾನದಿಂದ

ಅವರನ್ನು ಮೇಲೆತ್ತಲು ಸಾಧ್ಯವಾಗಿಲ್ಲ. ಸಮಾಜದಲ್ಲಿ ಅವರ ಸ್ಥಾನಮಾನ ಬದಲಾಗಿದ್ದರೂ ಅವರ ಪರಿಸ್ಥಿತಿ ಬದಲಾಗಿಲ್ಲ ಎನ್ನುವುದನ್ನು ಕನ್ನಡ ಕಥೆಗಳು ವ್ಯಕ್ತಪಡಿಸುತ್ತಾ ಬದಲಾಗಬೇಕಾದ ವ್ಯವಸ್ಥೆಯ ಕಡೆಗೆ ನೋಟ ಹರಿಸಿವೆ.

ತಮ್ಮ ಅಂತರಂಗಿಕ ಆಲೋಚನೆ, ಸಾಮರ್ಥ್ಯವನ್ನು ಮನಗಂಡ ಸ್ತ್ರೀ ಸಮುದಾಯ ತಮ್ಮನ್ನು ತಾವು ಗ್ರಹಿಸಿಕೊಂಡು ನಿರೂಪಿಸಿ ನಿರ್ವಹಿಸಿಕೊಳ್ಳಲು ಮುಂದಾಗಿರುವುದು ಕಥೆಗಳಲ್ಲಿ ಕಾಣಲು ಸಾಧ್ಯ. ಬದಲಾವಣೆ ಎನ್ನುವುದು ನಿರಂತರ ನಡೆಯುವ ಪ್ರಕ್ರಿಯೆಯಾದ ಕಾರಣ ಸಮಾಜದಲ್ಲಿ ಅದರ ಸದಸ್ಯರಾಗಿರುವ ವ್ಯಕ್ತಿಗಳಲ್ಲಿ ಬದಲಾವಣೆ ಸಹಜ ಪ್ರಕ್ರಿಯೆಗಳಾಗಿ ಕಾಣಿಸಿಕೊಂಡು ಕಾಲಕಾಲಕ್ಕೆ ಸಂಕೀರ್ಣ ಸಮಸ್ಯೆಗಳು ಉದ್ಭವಿಸಿವೆ. ಹೆಣ್ಣಿನ ಸಮಸ್ಯೆಗಳಿಗೆ ಸಮಾಜ ನೀಡಿರುವ ಅವಕಾಶಗಳೊಳಗೆ ಲೇಖಕಿಯರು ಪರಿಹಾರ ಕಾಣುವ ಯತ್ನ ನಡೆಸಿದ್ದಾರೆ. ಹಿಂದಿನ ಲೇಖಕಿಯರಿಗೆ ಸಂದರ್ಭ ಹೆಚ್ಚು ಕಠಿಣವಾಗಿತ್ತು. ಅರಿವು ಹೆಚ್ಚಾದಷ್ಟು ವ್ಯವಸ್ಥೆಯಲ್ಲಿ ಸಮಸ್ಯೆಗಳು ಸಂಕೀರ್ಣಗೊಂಡಿವೆ. ಸಂಕೀರ್ಣ ಸಮಸ್ಯೆಗಳಿಗೆ ವೈಚಾರಿಕ ರೂಪದ ಪರಿಹಾರ ಇಂದಿನ ಬರಹಗಾರ್ತಿಯರ ಸವಾಲಾಗಿರುವುದನ್ನು ಕನ್ನಡ ಕಥೆಗಳಲ್ಲಿ ಗುರುತಿಸಬಹುದಾಗಿದೆ.

ಶ್ರಮ ವಿಭಜನೆಯ ಆರಂಭದಲ್ಲಿ ಪುರುಷನು ಬೇಟೆ, ಮೀನು ಹಿಡಿಯುವುದು ಇತ್ಯಾದಿ ಕಸುಬುಗಳಲ್ಲಿ ತೊಡಗಿದ್ದರೆ, ಸ್ತ್ರೀ ತನ್ನ ಮನೆತನದ ಕುಲಕಸುಬುಗಳಾದ ಕುಂಬಾರಿಕೆ, ತೋಟಗಾರಿಕೆ ಇವುಗಳನ್ನು ಕೈಗೊಳ್ಳುವಲ್ಲಿ ಪರಸ್ಪರ ಇಬ್ಬರಲ್ಲೂ ಆರ್ಥಿಕ ಸಮಾನತೆ ಇತ್ತು. ನಂತರ ಪುರುಷನು ಕೃಷಿಗೆ ಬೇಕಾದ ಕಾಡು ಕಡಿದು ನೆಲ ಹಸನು ಮಾಡುವಲ್ಲಿ ಇತರ ಗಂಡಸರನ್ನು ಬಳಸಿಕೊಂಡು ಅವರ ಮೇಲೆ ಅಧಿಪತ್ಯ ಸ್ಥಾಪಿಸಿದ. ಜೊತೆಯಲ್ಲಿ ಇದೇ ಬಗೆಯಲ್ಲಿ ಹೆಂಗಸನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡ. ಈ ಸಂದರ್ಭದಲ್ಲಿ ಹೆಣ್ಣನ್ನು ಮನೆಯ ಒಳಗಿನ ಕೆಲಸ ಕಾರ್ಯಗಳಿಗೆ ನಿಯೋಜಿಸಿದರೆ, ತಾನು ಮಾತ್ರ ವಿನಿಮಯ ಮೌಲ್ಯವಿರುವ ಉತ್ಪಾದನೆಯಲ್ಲಿ ತೊಡಗಿಕೊಂಡು ಆಕೆಯನ್ನು ಪರಾವಲಂಬಿಯಾಗಿಸಿದ. ಹೆಣ್ಣಿನ ಬದುಕಿನ ಸಮಗ್ರ ಅಧ್ಯಯನ ಕೈಗೊಳ್ಳುವ ಸಿಮೋನ್ ದ ಬೋವಾ ಅಭಿಪ್ರಾಯ ಪಡುವಂತೆ “ಹೆಂಗಸು ಸಾಮಾಜಿಕವಾಗಿ ಹೆಚ್ಚು ಪ್ರಮಾಣದಲ್ಲಿ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿದಾಗ ಮತ್ತು ಮನೆಗೆಲಸದ ಪ್ರಮಾಣ ತೀರ ಕಡಿಮೆಯಾದಾಗ ಮಾತ್ರ ಆಕೆಯ ಸ್ಥಿತಿ ಉತ್ತಮಗೊಳ್ಳಬಲ್ಲದು. ಹೊಸ ಕಾಲದ ಬೃಹತ್ ಉದ್ದಿಮೆಗಳು ಮಾತ್ರ ಇಂಥ ಅವಕಾಶವನ್ನು ಕಲ್ಪಿಸಬಲ್ಲವು. ಅವು ಹೆಚ್ಚು ಹೆಂಗಸರನ್ನು ದುಡಿಮೆಯಲ್ಲಿ ಒಳಗೊಳ್ಳಬಲ್ಲವು. ಹಾಗೆ ಅವರು ಒಳಗಾಗುವುದನ್ನು ಅದು ಬಯಸುತ್ತದೆ ಕೂಡ” ಎನ್ನುವಲ್ಲಿ ಹೆಣ್ಣಿನ ಆರ್ಥಿಕತೆಯ ಅಭ್ಯಾಸ ಮತ್ತು ಪರಾವಲಂಬತೆಯ ಸ್ಥಿತಿಯೇ ಆಕೆಯ ಬದುಕಿನ ಅಧೀನತೆಗೆ ಕಾರಣಗಳಾಗಿ ಸೂಚಿಸಿದ್ದಾರೆ. ಇನ್ನೊಂದು ಕಡೆ ಸಿಮೋನ್ ದ ಬೋವಾ ಅಭಿಪ್ರಾಯ ಪಡುವಂತೆ “ನಾಗರಿಕ ಸ್ವಾತಂತ್ರ್ಯಕ್ಕೆ ಆರ್ಥಿಕ ಸ್ವಾತಂತ್ರ್ಯ ಬೆನ್ನೆಲುಬಾಗುವವರೆಗೂ ಅದು ಯಾವುದೇ ಉದಾತ್ತ ಉದ್ದೇಶವನ್ನು ಸಾಧಿಸದೆ ಹೋಗುತ್ತದೆ. ಅವಳು ಎಲ್ಲೆಡೆಯಲ್ಲಿಯೂ ಗುಲಾಮಳ ಸ್ಥಿತಿಯಲ್ಲೇ

ಇದ್ದಾಳೆ. ಅವಳು ಈ ಚೌಕಟ್ಟಿನಿಂದ ಹೊರಸಿಡಿದು ಬರಬೇಕಾದರೆ ಅವಳು ಆರ್ಥಿಕವಾಗಿ ಲಾಭದಾಯಕವಾದ ಉದ್ಯೋಗವೊಂದರ ಪಾಲುದಾರಳಾಗಬೇಕು. ಒಮ್ಮೆ ಅವಳು ಪರಾವಲಂಬಿಯಾಗುವುದು ತಪ್ಪಿತೆಂದರೆ ಅವಳ ಈ ದೌರ್ಬಲ್ಯದ ಮೇಲೆಯೇ ನಿರ್ಮಿತಗೊಂಡಂತಹ ವ್ಯವಸ್ಥೆ ತಂತಾನೆ ಕುಸಿಯುತ್ತದೆ. ಅವಳು ಹಾಗೂ ಜಗತ್ತಿನ ಮಧ್ಯೆ ಗಂಡಸು ಮಧ್ಯವರ್ತಿಯಾಗುವ ಪ್ರಮೇಯವೇ ಅಳಿಸಿ ಹೋಗುತ್ತದೆ'' ಎಂದು ಅಭಿಪ್ರಾಯಪಟ್ಟಿದ್ದಾರೆ. ಹೆಣ್ಣು ಅನುಭವಿಸುವ ಶೋಷಣೆಗಳಿಗೆಲ್ಲ ಕಾರಣವಾಗಿ ಇಲ್ಲಿ ಆರ್ಥಿಕ ಪರಾವಲಂಬನೆಯನ್ನೇ ತಿಳಿಯಲಾಗಿದೆ. ನೇಮಿಚಂದ್ರ ರವರ 'ಕಪ್ಪು ಮೋಡ ಬೆಳ್ಳಿ ಅಂಚು' ಕತೆಯು ಹೆಣ್ಣಿನ ಪರಾವಲಂಬನೆಯ ಜೀವನದ ದಾರುಣತೆಯನ್ನು ಬಿಚ್ಚಿಡುವುದಲ್ಲದೆ ಅದೇ ಹೆಣ್ಣು ತನಗೆ ತಿಳಿದ ಸ್ವ-ಉದ್ಯೋಗದಲ್ಲಿ ಬೆಳೆದು ಆರ್ಥಿಕವಾಗಿ ಸ್ವಾವಲಂಬಿಯಾದಾಗ ಆಕೆಯ ವ್ಯಕ್ತಿತ್ವ ಬದಲಾಗುವ ಸ್ಥಿತಿಯನ್ನು ಅನಾವರಣಗೊಳಿಸುತ್ತದೆ. ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಿದ ಕಥಾ ನಾಯಕಿ ಅವಳೇ ಹೇಳುವಂತೆ ''ಈ ಹಣದಿಂದ ಎಲ್ಲವನ್ನು ಕೊಳ್ಳಲಾರೆ ನಿಜ, ಆದರೆ ಹಣದಿಂದ ನಾನು ಬಹಳಷ್ಟನ್ನು ಕೊಳ್ಳಬಲ್ಲೆ. ನನ್ನ ಹಣ ನನಗೆ ಬಹಳಷ್ಟನ್ನು ಕೊಡಬಲ್ಲದು. ಪುಟ್ಟಿಯ ಭವಿಷ್ಯವನ್ನು ಕೊಡಬಲ್ಲದು. ನನ್ನ ನಾಳೆಗಳನ್ನು ಕೊಡಬಲ್ಲದು. ನಾನು ಕಳೆದುಕೊಂಡ ಆತ್ಮವಿಶ್ವಾಸವನ್ನು ಮರಳಿ ಕೊಡಬಲ್ಲದು.'' ಆರ್ಥಿಕವಾಗಿ ಪರಾವಲಂಬಿಯಾದ ಕಥಾ ನಾಯಕಿಯನ್ನು ಆಕೆಯ ಗಂಡ ಜೀವನದ ಅರ್ಧ ದಾರಿಯಲ್ಲಿ ಅತಂತ್ರಗೊಳಿಸಿ ತ್ಯಜಿಸಿ ಹೋದಾಗ ಸ್ವಾಭಿಮಾನಿಯಾಗಿ ತನಗೆ ತಿಳಿದ ಉದ್ಯೋಗದಲ್ಲಿ ಮೇಲೇರಿದ ಆಕೆಗೆ ಉದ್ಯೋಗವೇ ಭವಿಷ್ಯವನ್ನು ರೂಪಿಸುವ ಶಕ್ತಿ ಕೇಂದ್ರವಾಗುತ್ತದೆ. ಆಧುನಿಕ ಮಹಿಳೆ ಯಾವಾಗ ಬೇಕಾದರೂ ಮುರಿದು ಬೀಳಬಹುದಾದ ವಿವಾಹದಲ್ಲಿ ಭದ್ರತೆಯನ್ನು ಕಾಣದೆ ಉದ್ಯೋಗದಲ್ಲಿ ತನ್ನ ಜೀವನದ ಭದ್ರತೆಯನ್ನು ಕಾಣುತ್ತಿದ್ದಾಳೆ.

ಕಥಾ ಸಾಹಿತ್ಯವು ಸಮಾಜದಲ್ಲಿ ನಡೆಯುವ ಬದಲಾವಣೆಗಳನ್ನು ಪ್ರತಿಬಿಂಬಿಸುವ ಪ್ರಮುಖ ಮಾಧ್ಯಮವಾಗಿ ಜಾತಿ ವ್ಯವಸ್ಥೆ, ಲಿಂಗ ಅಸಮಾನತೆ, ದಾರಿದ್ರ್ಯ, ಶಿಕ್ಷಣದ ಕೊರತೆ ಇತ್ಯಾದಿ ಸಮಸ್ಯೆಗಳ ವಿರುದ್ಧ ಲೇಖಕರು ತಮ್ಮ ಕಥೆಗಳ ಮೂಲಕ ಪ್ರಶ್ನೆ ಎತ್ತಿದ್ದಾರೆ. ಹೊಸ ಯುಗದ ಕಥೆಗಳು ಸಮಾನತೆ, ನ್ಯಾಯ ಮತ್ತು ಮಾನವೀಯ ಮೌಲ್ಯಗಳನ್ನು ಉತ್ತೇಜಿಸುತ್ತವೆ.

ಸ್ತ್ರೀ ಸಂವೇದನೆ ಮತ್ತು ಸಾಮಾಜಿಕ ಪರಿವರ್ತನೆಯ ಸಂಧಾನ ಈ ಎರಡು ಅಂಶಗಳು ಪರಸ್ಪರ ಸಂಬಂಧ ಹೊಂದಿದ್ದು, ಮಹಿಳೆಯರ ಸ್ಥಿತಿ ಸುಧಾರಿಸುವುದು ಸಮಾಜದ ಸಮಗ್ರ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತದೆ. ಕಥೆಗಳು ಮಹಿಳೆಯರ ಮೇಲಿನ ಅನ್ಯಾಯವನ್ನು ತೋರಿಸುವುದರ ಜೊತೆಗೆ ಅವುಗಳನ್ನು ಸರಿಪಡಿಸುವ ಅಗತ್ಯವನ್ನು ಮನದಟ್ಟು ಮಾಡುತ್ತವೆ. ಇವುಗಳಲ್ಲಿ ಜಾಗೃತಿ ಮೂಡಿಸಿ ಸಮಾಜದಲ್ಲಿ ಬದಲಾವಣೆಗೆ ಪ್ರೇರಣೆಯಾಗುತ್ತವೆ. ಮಹಿಳೆಯ ಮನಸ್ಸು ಒಂದು ಮೌನ ಸಂಗೀತದಂತೆ ಕೇಳಿಸುತ್ತದೆ. ಅದರಲ್ಲಿ ನೋವು, ಕನಸು, ವಿರೋಧ ಮತ್ತು ಆತ್ಮ ಗೌರವದ ನಾದಗಳಿವೆ. ಆರಂಭಿಕ ಕಥೆಗಳಲ್ಲಿ ಸ್ತ್ರೀಯನ್ನು ಮನೆ, ಕುಟುಂಬ, ತ್ಯಾಗದ

ಚೌಕಟ್ಟಿನಲ್ಲಿ ಕಟ್ಟಿ ಹಾಕಲಾಗಿದ್ದರೂ ಮುಂದಿನ ಹಂತಗಳಲ್ಲಿ ಅವಳು ತನ್ನದೇ ಆದ ಗುರುತನ್ನು ಹುಡುಕುವ ವ್ಯಕ್ತಿಯಾಗಿ ರೂಪುಗೊಂಡಳು. ಅವಳ ಶಿಕ್ಷಣ, ಸ್ವಾತಂತ್ರ್ಯ ಮತ್ತು ನಿರ್ಧಾರ ಸಾಮರ್ಥ್ಯಗಳ ಕುರಿತು ಕಥೆಗಳು ಹೆಚ್ಚು ಜಾಗೃತಿ ಮೂಡಿಸಿವೆ. ಕನ್ನಡ ಕಥಾ ಸಾಹಿತ್ಯವು ಸಮಾಜದ ನಾಡಿಯ ತಲ್ಲಣಗಳನ್ನು ಹಿಡಿಯುವ ಜೀವಂತ ಸಾಧನ. ಅದರಲ್ಲಿ ಸ್ತ್ರೀ ಸಂವೇದನೆ ಮತ್ತು ಸಾಮಾಜಿಕ ಪರಿವರ್ತನೆಯ ಅಭಿವ್ಯಕ್ತಿ ಒಂದೇ ನಾಣ್ಯದ ಎರಡು ಮುಖಗಳಂತೆ ಪರಸ್ಪರ ಬೆಸೆದುಕೊಂಡಿವೆ.

ಕಥೆಗಳು ಕೇವಲ ಕಲ್ಪನೆಯ ಕಣಜವಲ್ಲ. ಅವು ಸಮಾಜದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ. ಜಾತಿ ಭೇದ, ಲಿಂಗ ಅಸಮಾನತೆ, ಆರ್ಥಿಕ ಅಸಮಾನತೆ ಮತ್ತು ಸಂಪ್ರದಾಯಗಳ ಕಟ್ಟಳೆಗಳ ವಿರುದ್ಧ ಕಥೆಗಳು ಧ್ವನಿ ಎತ್ತಿವೆ. ಹೊಸ ಕಥೆಗಳು ಮಾನವತೆ, ಸಮಾನತೆ, ನ್ಯಾಯ ಮತ್ತು ಮಾನವೀಯತೆ ಎಂಬ ಮೌಲ್ಯಗಳನ್ನು ಬೆಳಗಿಸುತ್ತವೆ. ಹಳೆಯ ಮನೋಭಾವಗಳನ್ನು ಮೃದುವಾಗಿ ಆದರೆ ದೃಢವಾಗಿ ಪ್ರಶ್ನಿಸುತ್ತವೆ. ಸ್ತ್ರೀ ಸಂವೇದನೆ ಮತ್ತು ಕಥೆಗಳು ಒಂದಕ್ಕೊಂದು ಬೆಳಕಾಗುತ್ತವೆ. ಮಹಿಳೆಯ ಅನುಭವಗಳನ್ನು ಬೆಳಗಿಸುವ ಮೂಲಕ ಕಥೆಗಳು ಸಮಾಜದ ಬದಲಾವಣೆಗೆ ಬಿತ್ತನೆ ಮಾಡುತ್ತವೆ. ಒಂದು ಪಾತ್ರದ ನೋವು ಮತ್ತೊಬ್ಬ ಓದುಗನ ಮನಸ್ಸಿನಲ್ಲಿ ಜಾಗೃತಿ ಮೂಡಿಸಿ ಬದಲಾವಣೆಯ ದಾರಿಯನ್ನು ತೆರೆದಿಡುತ್ತದೆ. ಒಟ್ಟಿನಲ್ಲಿ ಕನ್ನಡ ಕಥಾ ಸಾಹಿತ್ಯವು ಸ್ತ್ರೀಯ ಧ್ವನಿಗೆ ವೇದಿಕೆ ನೀಡುವುದಷ್ಟೇ ಅಲ್ಲ, ಸಮಾಜದ ಚಿಂತನೆಗೆ ಹೊಸ ದಿಕ್ಕನ್ನು ನೀಡುತ್ತದೆ. ಮಹಿಳೆಯರ ಅಂತರಂಗದ ಭಾವನೆಗಳು, ಅವರ ಅನುಭವಗಳು ಮತ್ತು ಜೀವನ ಹೋರಾಟಗಳ ಸೂಕ್ಷ್ಮ ಚಿತ್ರಣ. ಕನ್ನಡ ಕಥಾ ಸಾಹಿತ್ಯದ ಆರಂಭಿಕ ಹಂತಗಳಲ್ಲಿ ಮಹಿಳೆಯರನ್ನು ಹೆಚ್ಚಾಗಿ ತ್ಯಾಗಮೂರ್ತಿಗಳಾಗಿ ಮನೆತನದ ಸೀಮಿತ ವಲಯದಲ್ಲಿರುವವರಾಗಿ ಚಿತ್ರಿಸಲಾಗುತ್ತಿತ್ತು. ಆದರೆ ಕಾಲಕ್ರಮೇಣ ಈ ದೃಷ್ಟಿಕೋನ ಬದಲಾಗಿದೆ. ಮಹಿಳೆಯರನ್ನು ತಮ್ಮದೇ ಆದ ವ್ಯಕ್ತಿತ್ವ ಹೊಂದಿದ, ಆತ್ಮ ಗೌರವ ಮತ್ತು ಸ್ವಾತಂತ್ರ್ಯವನ್ನು ಹುಡುಕುವ ವ್ಯಕ್ತಿಗಳಾಗಿ ಚಿತ್ರಿಸಲಾರಂಭಿಸಿದರು. ಅವರು ಎದುರಿಸುವ ಅನ್ಯಾಯ, ಅಸಮಾನತೆ ಮತ್ತು ಸಾಮಾಜಿಕ ಒತ್ತಡಗಳನ್ನು ಕಥೆಗಳು ಮನೋಜ್ಞವಾಗಿ ಅನಾವರಣಗೊಳಿಸುತ್ತವೆ. ಇದರ ಜೊತೆಗೆ ಕನ್ನಡ ಕಥಾ ಸಾಹಿತ್ಯವು ಸಾಮಾಜಿಕ ಪರಿವರ್ತನೆಯ ಮಹತ್ವವನ್ನು ಕೂಡ ಒತ್ತಿ ಹೇಳುತ್ತದೆ. ಜಾತಿ ವ್ಯವಸ್ಥೆ, ಲಿಂಗ ಅಸಮಾನತೆ, ಅಜ್ಞಾನ, ದಾರಿದ್ರ್ಯ ಮುಂತಾದ ಸಮಸ್ಯೆಗಳ ವಿರುದ್ಧ ಕಥೆಗಳು ಪ್ರಶ್ನೆ ಎತ್ತುತ್ತವೆ. ಅನೇಕ ಕಥೆಗಳು ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಮಾನವೀಯತೆ ಬೆಳೆಸುವ ಅಗತ್ಯವನ್ನು ಪ್ರತಿಪಾದಿಸುತ್ತವೆ. ಹಳೆಯ ಸಂಪ್ರದಾಯಗಳ ಕಟ್ಟುಪಾಡುಗಳನ್ನು ಪ್ರಶ್ನಿಸುವ ಮೂಲಕ ಹೊಸ ಚಿಂತನೆಗಳಿಗೆ ದಾರಿ ಮಾಡಿಕೊಡುತ್ತವೆ.

ಸ್ತ್ರೀ ಸಂವೇದನೆ ಮತ್ತು ಸಾಮಾಜಿಕ ಪರಿವರ್ತನೆ ಪರಸ್ಪರ ಸಂಬಂಧ ಹೊಂದಿದ್ದು, ಮಹಿಳೆಯರ ಸ್ಥಿತಿ ಸುಧಾರಿಸುವುದು ಸಮಾಜದ ಸಮಗ್ರ ಅಭಿವೃದ್ಧಿಗೆ ಮುಖ್ಯವಾಗಿದೆ. ಕಥೆಗಳಲ್ಲಿ ಮಹಿಳೆಯರ ಬದುಕಿನ ವಾಸ್ತವತೆಗಳನ್ನು ತೋರಿಸುವ ಮೂಲಕ ಓದುಗರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಈ ಜಾಗೃತಿ ಸಮಾಜದಲ್ಲಿ

ಬದಲಾವಣೆಗೆ ಪ್ರೇರಣೆ ನೀಡುತ್ತದೆ. ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಮಹಿಳೆಯರ ಧ್ವನಿ ಇನ್ನಷ್ಟು ಸ್ಪಷ್ಟವಾಗಿದೆ. ಅವರು ಕೇವಲ ಕಥೆಯ ಪಾತ್ರಗಳಾಗಿರದೆ ತಮ್ಮ ಜೀವನವನ್ನು ಸ್ವತಂತ್ರವಾಗಿ ರೂಪಿಸಿಕೊಳ್ಳುವ ಶಕ್ತಿಯುತ ವ್ಯಕ್ತಿಗಳಾಗಿ ಮೂಡಿ ಬರುತ್ತಾರೆ. ಇಂತಹ ಕಥೆಗಳು ಓದುಗರ ಮನಸ್ಸಿನಲ್ಲಿ ಹೊಸ ಚಿಂತನೆಗಳನ್ನು ಹುಟ್ಟಿಸಿ ಸಮಾಜವನ್ನು ಮುನ್ನಡೆಸಲು ಸಹಕಾರಿಯಾಗುತ್ತವೆ.

ಒಟ್ಟಿನಲ್ಲಿ ಕನ್ನಡ ಕಥಾ ಸಾಹಿತ್ಯವು ಸ್ತ್ರೀ ಸಂವೇದನೆ ಮತ್ತು ಸಾಮಾಜಿಕ ಪರಿವರ್ತನೆಯ ಅಭಿವ್ಯಕ್ತಿಗೆ ಶಕ್ತಿಯುತವಾದ ವೇದಿಕೆಯಾಗಿದೆ. ಇದು ಕೇವಲ ಮನರಂಜನೆಗಾಗಿ ಮಾತ್ರವಲ್ಲ ಸಮಾಜವನ್ನು ಪರಿವರ್ತಿಸಲು ಸಹಕಾರಿಯಾಗುವ ಸಾಧನವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಅನುಪಮಾ ನಿರಂಜನ, (2008), ಸಾಹಿತ್ಯ ಮತ್ತು ಪ್ರಗತಿ, ಮೈಸೂರು: ಡಿ.ವಿ.ಕೆ. ಮೂರ್ತಿ ಪ್ರಕಾಶನ.
2. ನೇಮಿಚಂದ್ರ, (2011), ಮಹಿಳಾ ಅಧ್ಯಯನ, ಬೆಂಗಳೂರು: ಅಂಕಿತ ಪ್ರಕಾಶನ.
3. ಎಚ್. ಎಸ್. ಶ್ರೀಮತಿ, (2012), ಸ್ತ್ರೀವಾದಿ ಸಂಶೋಧನಾ ವಿಧಿ ವಿಧಾನಗಳು, ಬೆಂಗಳೂರು: ಬರಹ ಪಬ್ಲಿಷಿಂಗ್ ಹೌಸ್.
4. ಉಮಾ ದೇವಿ ಕೆ., (2000), ಭಾರತೀಯ ಸಮಾಜದಲ್ಲಿ ಮಹಿಳೆಯ ಸ್ಥಿತಿ (ಭಾರತದಲ್ಲಿ ಮಹಿಳಾ ಸಮಾನತೆ – ಒಂದು ಪುರಾಣ ಅಥವಾ ವಾಸ್ತವ?), ನವದೆಹಲಿ: ಡಿಸ್ಕವರಿ ಪಬ್ಲಿಷಿಂಗ್ ಹೌಸ್.
5. ಪ್ರಭಾವತಿ ಎಸ್.ವಿ., (2002), ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ಬೆಂಗಳೂರು: ರವಿ ಪ್ರಿಂಟರ್ಸ್.